ಚನ್ನ ಪಟ್ಟಣಕ್ಕೆ ಅಗ್ನಿಶಾಮಕ ಠಾಣೆ.

383 (401) ಶ್ರೀ ಸಾದತ್ ಅಲಿ ಖಾನ್ (ಚನ್ನ ಪಟ್ಟಣ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ಚನ್ನಪಟ್ಟಣದಲ್ಲಿ ಅಗ್ನಿಶಾಮಕ ಠಾಣೆ ತೆರೆಯಲು ಸರ್ಕಾರದ ಮಂಜೂರಾತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಕಟ್ಟಡದ ಕೆಲಸವನ್ನು ತೆಗೆದುಕೊಂಡಿರುವುದಿಲ್ಲವೇ?

ಇ) ಹಾಗಿದ್ದಲ್ಲಿ ಈ ಕೆಲಸಗಳನ್ನು ತೆಗೆದುಕೊಳ್ಳಲು ತಡವಾಗಿರುವ ಬಗ್ಗೆ ಕಾರಣಗಳೇನು?

ಈ) ಯಾವಾಗ ಕಟ್ಟಡದ ಕೆಲಸವನ್ನು ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಅಬಕಾರಿ ಮತ್ತು ಗೃಹ ಸಚಿವರು):-

ಅ) ಚನ್ನಪಟ್ಟಣ ಮತ್ತು ರಾಮನಗರದ ಮಧ್ಯೆ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು 1991-92ನೇ ಆರ್ಥಿಕ ಸಾಲಿನಲ್ಲಿ ಮಂಜೂರಾತಿ ನೀಡಲಾಗಿದೆ.

ಆ) ಇಲ್ಲ.

ಇ) ಜಮೀನು ಮತ್ತು ಆಯವ್ಯಯದ ಅನುದಾನವಿಲ್ಲದ ಕಾರಣ ಠಾಣೆಯ ಕಟ್ಟಡ ಕಾರ್ಯದಲ್ಲಿ ವಿಳಂಬವಾಗುತ್ತಿದೆ.

ಈ) ಕೃಷಿ ಮಾರುಕಟ್ಟೆ ಇಲಾಖೆಯು ಜಮೀನನ್ನು ಒದಗಿಸಿದ ಕೂಡಲೇ, ಹಾಗೂ ಆಯವ್ಯಯದಲ್ಲಿ ಅನುಧಾನವನ್ನು ಒದಗಿಸಿದ ನಂತರ ಸರ್ಕಾರ ಕಟ್ಟಡದ ನಿರ್ಮಾಣ ಕಾರ್ಯವನ್ನು ಕೂಡಲೇ ತೆಗೆದುಕೊಳ್ಳಲಾಗುವುದು.

ಮಂತ್ರಿಗಳವರ ಕಛೇರಿ ಬಳಕೆಗಾಗಿ ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರ ಖರೀದಿ

385 (543) ಶ್ರೀ ರಾಮಲಿಂಗ ರೆಡ್ಡಿ (ಜಯನಗರ):- ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ, ದಯವಿಟ್ಟು ಉತ್ತರಿಸುವರೆ?

ಅ) ಮಂತ್ರಿಗಳವರ ಕಛೇರಿ ಬಳಕೆಗಾಗಿ ಎಷ್ಟು ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರಗಳನ್ನು ಖರೀದಿಸಲಾಗಿದೆ?

ಆ) ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರಗಳಿಗೆ ತಗುಲಿದ ಪೂರ್ಣ ವೆಚ್ಚ ಎಷ್ಟು?

ಇ) ಆ ಯಂತ್ರಗಳನ್ನು ಸರಬರಾಜು ಮಾಡಿದ ಕಂಪನಿಗಳ ಹೆಸರು?

ಈ) ಇದರ ಬಗ್ಗೆ ವರ ಪಟ್ಟಿಯನ್ನು ಕರೆಯಲಾಗಿತ್ತೆ?

ಉ) ಆಡಳಿತ ವ್ಯವಹಾರವೆಲ್ಲಾ ಕನ್ನಡದಲ್ಲಿರುವಾಗ ಮಂತ್ರಿಗಳವರ ಕಛೇರಿಗ ಇಂತಹ ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರಗಳನ್ನು ಕೊಂಡುಕೊಳ್ಳುವ ಅವಶ್ಯಕತೆ ಇತ್ತೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಅ) 35

ಆ) 8,60,600-00

ಇ) 1) ಮೆ: ಕಿಯೋನಿಕ್ಸ್

2) ಮೆ: ಗೊದ್ರೇಜ್ ಮತ್ತು ಬಾಯ್ಸ್ ಮಾನ್ಯುಫ್ಯಾಕ್ಚರಿಂಗ್ ಕಂ.

ಈ) ಹೌದು.

ಅ) ಈ ಯಂತ್ರಗಳು ದ್ವಿಭಾಷಾ ಯಂತ್ರಗಳಾಗಿದ್ದು ಆಂಗ್ಲ ಹಾಗೂ ಕನ್ನಡ ಭಾಷೆಯಲ್ಲಿ ಬೆರಳಚ್ಚು ಮಾಡುವ ಸಾಧ್ಯತೆ ಇದೆ. ಈ ಯಂತ್ರಗಳನ್ನು ಈಗ ಒಂದು ತಿಂಗಳ ಹಿಂದೆ ಖರೀದಿಸಲಾಗಿದೆ. ಸಚಿವರುಗಳ ಕಛೇರಿಗಳಲ್ಲಿ ಸಾಕಷ್ಟು ಕೆಲಸದ ಒತ್ತಡವಿದ್ದು ಎಲೆಕ್ಟ್ರಾನಿಕ್ ಯಂತ್ರಗಳನ್ನು ಉಪಯೋಗಿಸುವುದರಿಂದ ಶೀಘ್ರವಾಗಿ ಹಾಗೂ ಸ್ವಚ್ಛವಾಗಿ ಬೆರಳಚ್ಚು ಮಾಡಲು ಸಹಾಯವಾಗಿದೆ.

ಕಾವೇರಿ ಜಲವಿವಾದ ಗಲಭೆಯಲ್ಲಿ ಬೆಂಗಳೂರಿನಲ್ಲಿ ನಡೆದ ಹಿಂಸಾತ್ಮಕ ಘಟನೆಯಲ್ಲಾದ ನಷ್ಟ.

386 (544) ಶ್ರೀ ರಾಮಲಿಂಗ ರೆಡ್ಡಿ (ಜಯನಗರ):- ಮಾನ್ಯ ಗೃಹ ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದಂತೆ ಟ್ರಿಬ್ಯೂನಲ್ ನೀಡಿದ ಆಂತರಿಕ ತೀರ್ಪನ್ನು ಗೆಜೆಟ್‌ನಲ್ಲಿ ಪ್ರಕಟಿಸಿದ್ದನ್ನು ವಿರೋಧಿಸಿ ಬೆಂಗಳೂರು ಬಂದ್ ನಡೆದ ಸಂದರ್ಭದಲ್ಲಿ ನಡೆಯಿತೆನ್ನಲಾದ ಹಿಂಸಾತ್ಮಕ ಘಟನೆಗಳಲ್ಲಿ ಬೆಂಗಳೂರಿನಲ್ಲಿ ಉಂಟಾದ ಒಟ್ಟು ನಷ್ಟ.

ಆ) ಇದುವರೆಗೆ ನೀಡಲಾದ ಪರಿಹಾರದ ವಿವರಗಳು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು.):-

ಅ) ರೂ. 2,02,85,000-00

ರೂ. 15,00,00,000-00 (ಕೈಗಾರಿಕಾ ಸಂಸ್ಥೆಗಳು)

ರೂ.17,02,85,000-00

ಆ) 1) ರೂ.1,85,99,750-00 (ಆಸ್ತಿ-ಪಾಸ್ತಿ ನಷ್ಟಕ್ಕೆ)

2) ರೂ.12,25,500-00 (ಸಾವು ನೋವುಗಳಿಗೆ)

ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದ ಹಿಂಸಾಕೃತ್ಯದಲ್ಲಿ ಬೆಂಗಳೂರು ನಗರದಲ್ಲಿ ಮಡಿದವರ ಹಾಗೂ ಗಾಯಗೊಂಡವರ ಸಂಖ್ಯೆ.

387 (545) ಶ್ರೀ ರಾಮಲಿಂಗರೆಡ್ಡಿ (ಜಯನಗರ):-ಮಾನ್ಯ ಗೃಹ ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದಂತೆ ಬೆಂಗಳೂರು ಬಂದ್ ಆಚರಣೆಯಲ್ಲಿ ಮತ್ತು ಆನಂತರ ದಿನಗಳಲ್ಲಿ ಪೋಲೀಸ್ ಗೋಲಿಬಾರ್‌ನಿಂದ ಸತ್ತವರ ಹಾಗೂ ಗಾಯಗೊಂಡವರ ಸಂಖ್ಯೆ ಎಷ್ಟು;

ಆ) ಸತ್ತವರ ಮತ್ತು ಗಾಯಗೊಂಡವರ ಕುಟುಂಬಗಳಿಗೆ ನೀಡಲಾದ ಪರಿಹಾರಧನದ ಮೊತ್ತವೆಷ್ಟು;

ಇ) ಸತ್ತವರಲ್ಲಿ ಮತ್ತು ಗಾಯಗೊಂಡವರಲ್ಲಿ ಕನ್ನಡಿಗರು ಹಾಗೂ ತಮಿಳರ ಸಂಖ್ಯೆ ಎಷ್ಟು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು.):-

ಅ) ಅ) 16 ಜನರು ಪೋಲೀಸ್ ಗೋಲಿಬಾರ್‌ನಲ್ಲಿ ಮೃತಪಟ್ಟಿರುತ್ತಾರೆ.

ಆ) 28 ಜನರು ಗಾಯಗೊಂಡಿರುತ್ತಾರೆ.

ಆ) ರೂ.12,25,500-00